**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 844/2017**

| | | |
|---|---|---|
| ಸಾಕ್ಷಿಯ ಹೆಸರುಃ | ಪುಂಡಲಿಕ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಭೀಮರಾಯ | ಚಾಸಾಃ 1 |
| ವಯಸ್ಸು ಃ | 45 ವರ್ಷ | ದಿಃ 22-02-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯರಗೋಳ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 2 ರಿಂದ 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ನಾವು ಮತ್ತೆ ನಮ್ಮ ಚಿಕ್ಕಪ್ಪ ಮಲ್ಲಪ್ಪ, ತಂದೆ ಶಿವರಾಯ ಸುಮಾರು ವರ್ಷಗಳಿಂದ ನಮ್ಮ ತಂದೆಯವರ ಹೊಲವನ್ನು ಸಾಗುವಳಿ ಮಾಡುತ್ತಾ ಬಂದಿರುತ್ತೇವೆ. ಸನಃ 1998 ರಲ್ಲಿ 1, 7, 8 ನೇ ಆರೋಪಿತರು ನನ್ನ ವಿರುದ್ದ ಪಾಲು ವಾಟನಿ ಸಲುವಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆ ನಮ್ಮ ಪರವಾಗಿ ಡಿಕ್ರಿಯಾಗಿದ್ದು ಇರುತ್ತದೆ. ನಂತರ 1, 7, 8 ನೇ ಆರೋಪಿತರು ಸದರಿ ಡಿಕ್ರಿಯ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಪೀಠಕ್ಕೆ ಅಫಿಲು ಸಲ್ಲಿಸಿರುತ್ತಾರೆ. ಸದರಿ ಅಫಿಲು ಕೂಡ ನಮ್ಮ ಪರವಾಗಿ ಆದೇಶವಾಗಿರುತ್ತದೆ. ನಂತರ ಸದರಿ ಆದೇಶವಾದ ನಂತರ ನಾವು ನಮ್ಮ ಹೊಲಕ್ಕೆ ಹೋಗಿರುತ್ತೇವೆ. ಸದರಿ ಹೊಲದಲ್ಲಿ ಬಿತ್ತನೆ ಮಾಡಲು ಹೋಗಿರುತ್ತೇವೆ. 1, 7, 8 ನೇ ಆರೋಪಿತರು ನಮಗೆ ಹೊಲದಲ್ಲಿ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾನು ತಹಶಿಲ್ದಾರ ಕಚೇರಿಗೆ ಹೋಗಿ ಆರೋಪಿತರ ವಿರುದ್ದ ಅರ್ಜಿಯನ್ನು ಸಲ್ಲಿಸಿರುತ್ತೇನೆ. ತಹಶಿಲ್ದಾರವರು ಪಿ. ಎಸ್. ಐ. ಇವರಿಗೆ ಸೂಚನೆ ಕೊಡುತ್ತೇನೆ ಅಂತ ಹೇಳಿ ನಮಗೆ ಕಳುಹಿಸಿರುತ್ತಾರೆ. ದಿನಾಂಕಃ 07-10-2015 ರಂದು ನಾನು ಮತ್ತು ಚಾಸಾಃ 6 ರವರು ಯಾದಗಿರಿಗೆ ಬಂದಾಗ ಚಾಸಾಃ 7 ಮತ್ತು 8 ರವರು ಕರೆ ಮಾಡಿ ಆರೋಪಿತರು ನಮ್ಮ ಹೊಲದಲ್ಲಿ ಬಿತ್ತನೆ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿರುತ್ತಾರೆ. ಸದರಿ ಜಮೀನುಗಳ ಸರ್ವೆ ನಂಬರ 230/ಅ, 231/ಆ ಮತ್ತು 176 ಹಾಗೂ ವಡ್ಡನಳ್ಳಿ ಗ್ರಾಮದ ಸೀಮಾಂತರದಲ್ಲಿ ಬರುವ ಜಮೀನು ಸರ್ವೆ ನಂಬರ 27/30 ರಲ್ಲಿ ಎಲ್ಲಾ ಆರೋಪಿತರು ಬಿತ್ತನೆ ಮಾಡುತ್ತಿದ್ದರು. ನಾವು ಸದರಿ ಜಮೀನುಗಳಲ್ಲಿ

ಹೋಗಿ ಯಾಕೆ ನನ್ನ ಹೊಲದಲ್ಲಿ ಬಿತ್ತನೆ ಮಾಡುತ್ತಿದ್ದೀರಿ ನ್ಯಾಯಾಲಯದ ಆದೇಶ ಇದ್ದರೂ ಕೂಡ ಯಾಕೆ ನಮ್ಮ ಮೇಲೆ ದೌರ್ಜನ್ಯ ಮಾಡುತ್ತಿದ್ದೀರಿ ಎಂದು ಆರೋಪಿತರಿಗೆ ಕೇಳಿರುತ್ತೇವೆ. ಆರೋಪಿತರೆಲ್ಲರೂ ನಮಗೆ ಬೊಸಡಿ ಮಕ್ಕಳರೇ, ರಂಡಿ ಮಕ್ಕಳರೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಮತ್ತು ಜೀವ ಸಹಿತ ಬಿಡುವುದಿಲ್ಲ ಮಣ್ಣಲ್ಲಿ ಹೂತು ಹಾಕುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ತದ ನಂತರ ನಾವು ಅಲ್ಲಿಂದ ಮರಳಿ ಮನೆಗೆ ಬಂದಿರುತ್ತೇವೆ. ನಂತರ ನಾನು ಮತ್ತು ಚಾಸಾ 6 ರವರು ಕೂಡಿಕೊಂಡು ಮಾತನಾಡಿ ಇದು ಬಗೆಹರಿಯುವುದಿಲ್ಲ ಅಂತ ವಿಚಾರ ಮಾಡಿ ನಾವು ಹತ್ತು ದಿನಗಳ ನಂತರ 17-10-2015 ರಂದು ಪೋಲಿಸ ಠಾಣೆಗೆ 1 ಗಂಟೆ ಸುಮಾರಿಗೆ ಹೋಗಿರುತೇವೆ. ಸದರಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದನ್ನು ಸಾಕ್ಷಿಯು ಗುರುತಿಸಿರುವುದರಿಂದ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಅದೇ ದಿನ ಸಂಜೆ : 4-00 ಗಂಟೆ ಸುಮಾರಿಗೆ ಪೋಲಿಸರು ಬಂದು ತನಿಖೆಯನ್ನು ಜರುಗಿಸಿರುತ್ತಾರೆ. ಸದರಿ ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರಕಾರಿ ಅಭೀಯೊಜಕರು ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ**

ನಾನು ಪಂಚನಾಮೆಯಾದ ನಂತರ ತನಿಖಾಧಿಕಾರಿಗಳಿಗೆ ಪಹಣಿಗಳನ್ನು ನೀಡಿರುತ್ತೇನೆ. ಸನಃ 2015-2016 ರ ವಡ್ಡನಳ್ಳಿ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂಬರ 27/30/2 ನೇದ್ದರ ಪಹಣಿಯನ್ನು ನಿಪಿ-2 ಎಂದು ಗುರುತಿಸಲಾಯಿತು.

ಸನಃ 2014-2015 ರ ಯರಗೋಳ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂಬರ 230/ಆ ನೇದ್ದರ ಪಹಣಿಯನ್ನು ನಿಪಿ-3 ಎಂದು ಗುರುತಿಸಲಾಯಿತು.

ಸನಃ 2015-2016 ರ ಯರಗೋಳ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂಬರ 230/1/ಅ ನೇದ್ದರ ಪಹಣಿಯನ್ನು ನಿಪಿ-4 ಎಂದು ಗುರುತಿಸಲಾಯಿತು.

ಸನಃ 2015-2016 ರ ಯರಗೋಳ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂಬರ 176 ನೇದ್ದರ ಪಹಣಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಶ್ರೀ ಜಿ ಎಸ್ ಎನ್ ವಕೀಲರಿಂದ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಿನಾಂಕಃ 07-10-2015 ರಂದು ನಾನು ಯಾದಗಿರಿಗೆ ಬಂದಿರುತ್ತೇನೆ. ಯಾದಗಿರಿಗೆ ಬಂದು ಊರಿಗೆ ಎಷ್ಟು ಗಂಟೆಗೆ ಮರಳಿ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಬೆಳಿಗ್ಗೆ 11-00 ಗಂಟೆಗೆ ಯಾದಗಿರಿಗೆ ಬಂದಿರುತ್ತೇನೆ ಮದ್ಯಾಹ್ನ 3-00 ಗಂಟೆಗೆ ಮಾಹಿತಿ ಬಂದ ನಂತರ ಊರಿಗೆ ಮರಳಿ ಹೋಗಿರುತ್ತೇನೆ. ನನಗೆ ಚಾಸಾಃ 7 ಮತ್ತು 8 ರವರು ಒಂದೇ ಮೋಬೈಲನಿಂದ ಕರೆ ಮಾಡಿ ಮಾಹಿತಿಯನ್ನು ತಿಳಿಸಿರುತ್ತಾರೆ. ಸದರಿ ಫೋನು ಕರೆ ಬಂದ ನಂತರ ಪೋಲಿಸ ಠಾಣೆಗೆ ಹೋಗಿರುತ್ತಿಯಾ? ಎಂದರೆ ಸಾಕ್ಷಿಯು ಮೊದಲು ಜಮೀನಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾದಗಿರಿಯಿಂದ ಜಮೀನಿಗೆ ಹೋಗಿರುತ್ತೇನೆ ಎಂದರೆ ಸರಿ. ನಿಪಿ-2 ರಿಂದ 5 ರಲ್ಲಿ ತೋರಿಸಲಾದ ಜಮೀನುಗಳು ಬೇರೆ-ಬೇರೆ ಕಡೆ ಇದೆ ಎಂದರೆ ಸಾಕ್ಷಿಯು ಸಮೀಪದಲ್ಲಿದೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ತೋರಿಸಲಾದ ಜಮೀನು ವಡ್ಡನಳ್ಳಿ ಸೀಮೆಯಲ್ಲಿ ಬರುತ್ತದೆ ಎಂದರೆ ಸರಿ. ಸದರಿ ನಿಪಿ-2 ರಿಂದ 5 ರಲ್ಲಿ ನಮೂದಿಸಿದ ಜಮೀನುಗಳು ಬೇರೆ-ಬೇರೆ ಕಡೆ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ-2 ರಿಂದ 5 ರಲ್ಲಿ ನಮೂದಿಸಿದ ಜಮೀನುಗಳು ನನ್ನ ಹೆಸರಿನಲ್ಲಿ ಇವೆ. ಸದರಿ ಸಾಕ್ಷಿಯು ನಿಪಿ-2 ರಿಂದ 5 ರಲ್ಲಿರುವ ಜಮೀನುಗಳು ತೋರಿಸಲಾಗಿ ಸಾಕ್ಷಿಯು ನನ್ನ ಹೆಸರು ಇರುವುದಿಲ್ಲ ನನ್ನ ತಂದೆಯ ಹೆಸರು ಇದೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ 9 ನೇ ಆರೋಪಿತಳ ಹೆಸರು ಇದೆ ಎಂದರೆ ಸರಿ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುವುದರಿಂದ ನಮ್ಮ ನಡುವೆ ವೈಮನಸ್ಸು ಇದೆ ಎಂದರೆ ಸರಿ. ನಾನು ಘಟನೆ ನಡೆದ ದಿನಾಂಕವೇ ದೂರು ಯಾಕೆ ನೀಡಿಲ್ಲ? ಎಂದರೆ ಸಾಕ್ಷಿಯು ನಾವು ಭಯದಲ್ಲಿ ಇದ್ದೆವು ಆದ್ದರಿಂದ ದೂರನ್ನು ನೀಡಿರುವುದಿಲ್ಲ. ಯರಗೋಳ ಗ್ರಾಮದಲ್ಲಿ ಓ.ಪಿ ಪೋಲಿಸ ಠಾಣೆ ಇದೆ ಎಂದರೆ ಸರಿ. ಸದರಿ ಓ.ಪಿ ಪೋಲಿಸ ಠಾಣೆಯಿಂದ ಹೋಗಿ ಸಹಾಯ ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಪೋಲಿಸ ಠಾಣೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾವು 10 ದಿನಗಳ ನಂತರ ಪೋಲಿಸ ಠಾಣೆಗೆ ಹೋಗಿರುತ್ತೇವೆ. ಯಾದಗಿರಿ

ಪೊಲೀಸ ಠಾಣೆಗೆ ನಾನು ಮತ್ತು ಚಾಸಾಃ 6 ರವರು ಹೋಗಿರುತ್ತೇವೆ. ನಾವು ಸದರಿ ನಿಪಿ-1 ನ್ನು ಪೋಲಿಸರಿಗೆ ತಿಳಿಸಿದ ನಂತರ ಅವರು ಬರೆದು ನಮಗೆ ಓದಿ ತಿಳಿಸಿರುತ್ತಾರೆ. ನಾವು ಪೋಲಿಸ ಠಾಣೆಗೆ ಮದ್ಯಾಹ್ನ 1-00 ಗಂಟೆಗೆ ಹೋಗಿರುತ್ತೇವೆ. ನಾವು ಪೋಲಿಸ ಠಾಣೆಗೆ 1-00 ಗಂಟೆಗೆ ಹೋಗಿ ಮರಳಿ 2-00 ಗಂಟೆಗೆ ನಮ್ಮ ಊರಿಗೆ ಬಂದಿರುತ್ತೇವೆ. ಜಮೀನು ಸರ್ವೆ ನಂಬರ 230/ಆ ಎಷ್ಟು ಕ್ಷೇತ್ರ ಇದೆ ಎಂದರೆ ಸಾಕ್ಷಿಯು 5 ಎಕರೆ ಎಂದು ನುಡಿಯುತ್ತಾರೆ. ಜಮೀನು ಸರ್ವೆ ನಂಬರ 230/ಅ ಎಷ್ಟು ಕ್ಷೇತ್ರ ಇದೆ ಎಂದರೆ ಸಾಕ್ಷಿಯು 4 ಎಕರೆ 32 ಗುಂಟೆ ಇದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ 27/30 ಎಷ್ಟು ಕ್ಷೇತ್ರ ಇದೆ ಎಂದರೆ ಸಾಕ್ಷಿಯು 9 ಎಕರೆ ಇದೆ ಎಂದು ನುಡಿಯುತ್ತಾರೆ. ಆರೋಪಿತರು ಯಾವ ಜಮೀನು ಸರ್ವೆ ನಂಬರಿನಲ್ಲಿ ಬಿತ್ತನೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಜಮೀನು ಸರ್ವೆ ನಂಬರ 176 ರಲ್ಲಿ ಬಿತ್ತನೆ ಮಾಡುತ್ತಿದ್ದರು ಎಂದು ನುಡಿಯುತ್ತಾನೆ. ಬೇರೆ ಜಮೀನುಗಳಲ್ಲಿ ಬಿತ್ತನೆ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಜಮೀನು ಸರ್ವೆ ನಂಬರ 176 ರಲ್ಲಿ ಮುಗಿಸಿ ಬೇರೆ ಜಮೀನು ಸರ್ವೆ ನಂಬರಗಳಲ್ಲಿ ಬಿತ್ತನೆ ಮಾಡಲು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಯಾದಗಿರಿಯಿಂದ ಹೊಲಕ್ಕೆ 4-00 ಗಂಟೆಗೆ ಹೋಗಿರುತ್ತೇನೆ, ಸದರಿ ಹೊಲದಲ್ಲಿ 1-00 ಗಂಟೆ ಕಾಲದವರೆಗೆ ಇದ್ದೆವು. ಸದರಿ ಹೊಲದಲ್ಲಿ ಎಲ್ಲಾ ಆರೋಪಿತರು ಇದ್ದರು. ಸದರಿ ಟ್ರ್ಯಾಕ್ಟರ ಮೂಲಕ ಯಾರು ಬಿತ್ತನೆ ಮಾಡುತ್ತಿದ್ದರು? ಎಂದರೆ ಸಾಕ್ಷಿಯು ಚಾಲಕ ವೆಂಕಟೇಶ ಹಾಗೂ ಕೆಲಸಕ್ಕೆ ಹೆಣ್ಣುಮಕ್ಕಳು ಹಾಗೂ ಆರೋಪಿತರೆಲ್ಲರೂ ಇದ್ದರು. ಸದರಿ ನನಗೆ ಟ್ರ್ಯಾಕ್ಟರ ನಂಬರ ಹೇಳಲು ಬರುವುದಿಲ್ಲ. ಬಿತ್ತನೆ ಮಾಡುವಾಗ ಯಾರಿಗೆ ಹೋಗಿ ಕೇಳಿರುತ್ತಿಯಾ? ಎಂದರೆ ಸಾಕ್ಷಿಯು 1 ನೇ ಆರೋಪಿತನಿಗೆ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಆರೋಪಿತನು ನಮಗೆ ಸಂಬಂಧಿಕನಲ್ಲ. 8 ನೇ ಆರೋಪಿತನು ನಮಗೆ ಸಂಬಂಧಿಕರು ಎಂದರೆ ಸರಿ. ಸದರಿ ಆರೋಪಿತರೆಲ್ಲರೂ ನಮ್ಮ ಹೊಲದಲ್ಲಿ ಬಿತ್ತನೆ ಮಾಡುತ್ತಿದ್ದರು ಎಂಬ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫೋನು ಕರೆ ಬಂದ ನಂತರ ನಾನು ಜಮೀನಿಗೆ ಹೋಗಿ ಆರೋಪಿತರೆಲ್ಲರಿಗೆ ನಮ್ಮ ಹೊಲದಲ್ಲಿ ಯಾಕೆ ಬಿತ್ತನೆ ಮಾಡುತ್ತಿದ್ದೀರಾ ಎಂದು ಕೇಳಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ನಮಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 6 ನೇ ಮತ್ತು 9 ನೇ ಆರೋಪಿತರು ಜಮೀನಿನ ಖರಿದಿದಾರರು ಎಂದರೆ ಸಾಕ್ಷಿಯು ಅವರು ಖರಿದಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 9 ನೇ ಆರೋಪಿತನ ಹೆಸರು ಪಹಣಿಯಲ್ಲಿ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದದರೆ ಸರಿಯಲ್ಲ. ಸದರಿ ದಿನಾಂಕಃ 07-10-2015 ರಂದು ಆರೋಪಿತರೆಲ್ಲರೂ ಯಾವುದೇ ಜಮೀನಿಗೆ ಹೋಗದೇ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮಗೆ ಮತ್ತು ಆರೋಪಿತರ ನಡುವೆ ವೈಮನಸ್ಸು ಇರುವುದರಿಂದ ಮತ್ತು ಆರೊಪಿತರು ನಮ್ಮ ವಿರುದ್ದ ದಾವೆಯನ್ನು ಸಲ್ಲಿಸಿದ್ದರಿಂದ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 844/2017**

| | | |
|---|---|---|
| ಸಾಕ್ಷಿಯ ಹೆಸರುಃ | ಮಲ್ಲಪ್ಪ | ಫ್ರಾಸಾಃ 2 |
| ತಂದೆ/ಗಂಡನ ಹೆಸರುಃ | ಶಿವರಾಯ | ಚಾಸಾಃ 6 |
| ವಯಸ್ಸು ಃ | 60 ವರ್ಷ | ದಿಃ 22-02-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯರಗೋಳ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ನನಗೆ ಚಾಸಾಃ 1 ರಿಂದ 5 ಮತ್ತು 7 ರಿಂದ 9 ರವರ ಪರಿಚಯವಿದೆ. ನನಗೆ ನ್ಯಾಯಾಲಯದ ಮುಂಚೆ ಹಾಜರಿರುವ ಆರೋಪಿತರ ಪರಿಚಯವಿದೆ. ಆರೋಪಿ ನಂಬರ 1, 7, 8 ಆರೋಪಿತರು ನಮಗೆ ಜಮೀನು ಇಲ್ಲ ಎಂದು ಹೇಳಿರುತ್ತಾರೆ. ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆದೇಶವಾಗಿದ್ದು ಇರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರಕಾರಿ ಅಭೀಯೊಜಕರು ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ನ್ಯಾಯಾಲಯದ ಮುಂದೆ ಇರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

ನಾನು ಮತ್ತು ಚಾಸಾಃ 1 ರವರ ತಂದೆ ಅಣ್ಣ-ತಮ್ಮಂದಿರು ಎಂದರೆ ಸರಿ. ನನ್ನ ಅಣ್ಣ ಮರಣ ಹೊಂದಿದ ನಂತರ ಚಾಸಾಃ 1 ಮತ್ತು ನಾನು ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ಸದರಿ 1, 7, 8 ನೇ ಆರೋಪಿತರು ನಮ್ಮ ವಿರುದ್ದ ದಾವೆಯನ್ನು ದಾಖಲಿಸಿರುತ್ತಾರೆ. ಸದರಿ ದಾವೆಯ ಆದೇಶ ನಮ್ಮ ಪರವಾಗಿ ಆಗಿರುತ್ತದೆ. ನಂತರ ಸದರಿ ಆದೇಶದ ವಿರುದ್ದ ಆರೋಪಿತರು 1, 7, 8 ರವರು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಪೀಠ ಇವರಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ಆದೇಶ ನಮ್ಮ ಪರವಾಗಿ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶ ನಮ್ಮ ಪರವಾಗಿ ಆದ ನಂತರ 1, 7, 8 ನೇ ಆರೋಪಿತರು ನಮಗೆ ಭಯ ಮತ್ತು

ಜಮೀನಿನಿಂದ ಹೊರಗೆ ಹಾಕಿರುತ್ತಾರೆ ಎಂದರೆ ಸರಿ . ನಂತರ ತಹಶೀಲ್ದಾರ ಇವರಿಗೆ ಆರೋಪಿತರ ವಿರುದ್ದ ಅರ್ಜಿ ನೀಡಿರುತ್ತೇವೆ ಎಂದರೆ ಸರಿ. ಸದರಿ ತಹಶೀಲ್ದಾರರು ಪಿ ಎಸ್ ಐ ಯಾದಗಿರಿ ಇವರಿಗೆ ಸೂಚನೆಯನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ನ್ಯಾಯಾಲಯದ ಆದೇಶದ ಪ್ರಕಾರ ನಡೆದುಕೊಳ್ಳಲು ಆರೋಪಿತರಿಗೆ ಸೂಚಿಸಿರುತ್ತಾರೆ ಎಂದರೆ ಸರಿ.

ದಿನಾಂಕಃ 07-10-2015 ರಂದು ನಾನು ಮತ್ತು ಚಾಸಾಃ 1 ರವರು ಖಾಸಗಿ ಕೆಲಸದ ನಿಮಿತ್ಯವಾಗಿ ಯಾದಗಿರಿಗೆ ಬಂದಿರುತ್ತೇವೆ ಎಂದರೆ ಸರಿ. ಅದೇ ದಿನ 3-00 ಗಂಟೆಗೆ ಚಾಸಾಃ 7 ಮತ್ತು 8 ರವರು ನಮಗೆ ಫೋನು ಕರೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಫೋನು ಕರೆಯ ಮೂಲಕ ಆರೋಪಿತರೆಲ್ಲರೂ ನಮ್ಮ ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 230/ಆ, 231/ಅ ಮತ್ತು 176 ಹಾಗೂ ವಡ್ಡನಳ್ಳಿ ಗ್ರಾಮದ ಸರ್ವೆ ನಂಬರ 27/30 ರಲ್ಲಿ ಆರೋಪಿತರೆಲ್ಲರೂ ಬಿತ್ತನೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಚಾಸಾಃ 1 ಮತ್ತು ಚಾಸಾಃ 7 ಮತ್ತು ಚಾಸಾಃ 8 ರವರು ಜಮೀನಿಗೆ ಹೋದಾಗ ಆರೋಪಿತರೆಲ್ಲರೂ ನಮ್ಮ ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಟ್ರ್ಯಾಕ್ಟರ ವೆಂಕಟೇಶ ಅವರಿಗೆ ಸೇರಿದ್ದು ಇರುತ್ತದೆ ಎಂದರೆ ಸರಿ. ಸದರಿ ನಾವು ಆರೋಪಿತರೆಲ್ಲರಿಗೆ ನಮ್ಮ ಹೊಲದಲ್ಲಿ ಯಾಕೆ ಬಿತ್ತನೆ ಮಾಡುತ್ತಿದ್ದೀರಾ ಎಂದು ಕೇಳಿದಾಗ ಆರೋಪಿತರೆಲ್ಲರೂ ನಮಗೆ ಬೊಸಡಿ ಮಕ್ಕಳೇ, ರಂಡಿ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾರೆ. ಸದರಿ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿ ನಮ್ಮ ಹೊಲದಲ್ಲಿ ಅತೀಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲುಃ ಶ್ರೀ ಜಿ ಎಸ್ ಎನ್ ವಕೀಲರು ಇವರಿಂದ**

ಚಾಸಾಃ 1 ರವರು ಯಾದಗಿರಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾಃ 1 ರವರು ಯಾದಗಿರಿಯಲ್ಲೇ ಹುಟ್ಟಿ ಬೆಳೆದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1, 7, 8 ನೇ ಆರೋಪಿತರು ನಮ್ಮ ವಿರುದ್ದ ದಾವೆಯನ್ನು ಸಲ್ಲಿಸಿರುವುದಿಲ್ಲ. ನಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ಸರಿ. ಸದರಿ ಚಾಸಾಃ 7 ಮತ್ತು 8 ರವರು ಯಾರ ಮೊಬೈಲಗೆ ಕರೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾಃ 1 ರವರ ಮೊಬೈಲಗೆ ಕರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಫೋನು ಕರೆ ಮಾಡಿದ ತಕ್ಷಣ ನಾವು ಜಮೀನಿಗೆ ಹೋಗಿರುತ್ತೇವೆ. ನಾನು ಮತ್ತು

ಚಾಸಾಃ 1, 7, 8 ರವರು ಜಮೀನಿಗೆ ಹೋಗಿರುತ್ತೇವೆ . ನಾವು ಮದ್ಯಾಹ್ನ 3-00 ಗಂಟೆಗೆ ಜಮೀನಿಗೆ ಹೋಗಿರುತ್ತೇವೆ. ಚಾಸಾಃ 7, 8 ರವರು ಎಲ್ಲಿದ್ದರು? ಎಂದರೆ ಸಾಕ್ಷಿಯು ಯರಗೋಳ ಗ್ರಾಮದಲ್ಲಿ ಇದ್ದರು ಎಂದು ನುಡಿಯುತ್ತಾರೆ. ನಾವು ಎಲ್ಲರೂ ಕೂಡಿ ಜಮೀನು ಸರ್ವೆ ನಂಬರ 160 ಗೆ ಹೋಗಿರುತ್ತೇವೆ. ಯರಗೋಳದಿಂದ ಜಮೀನಿಗೆ ಹೋಗಲು 1-00 ಗಂಟೆ ಸಮಯಾವಕಾಶ ಬೇಕಾಗುತ್ತದೆ. ನಾವು ಜಮೀನಿಗೆ ಹೋದಾಗ ಜಮೀನಿನಲ್ಲಿ 9 ಜನ ಇದ್ದರು. ಸದರಿ ಜಮಿನಿನಲ್ಲಿ ಯಾರು-ಯಾರು ಇದ್ದರು ಎಂದರೆ ಸಾಕ್ಷಿಯು 1, 2, 4, 5, 6, 8, 9, 10 ನೇ ಆರೋಪಿತರು ಇದ್ದರು ಎಂದು ನುಡಿಯುತ್ತಾರೆ. ಸದರಿ ಆರೋಪಿತರೆಲ್ಲರೂ ಏನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಬಿತ್ತನೆಯನ್ನು ಯಾವುದರ ಮೂಲಕ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಟ್ರ್ಯಾಕ್ಟರ ಮೂಲಕ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಟ್ರ್ಯಾಕ್ಟರಿಂದ ಬಿತ್ತನೆ ಮಾಡುವಾಗ ಬೇರೆ ವ್ಯಕ್ತಿಗಳ ಸಹಾಯ ಬೇಕಾಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ 160 ಅದರ ಕ್ಷೇತ್ರ 10 ಎಕರೆ 10 ಗುಂಟೆ ಇದೆ. ಆರೋಪಿತರೆಲ್ಲರೂ ಜಮೀನಿನಲ್ಲಿ ಬಿತ್ತನೆ ಮಾಡುತ್ತಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಚಾಸಾಃ 1 ರವರು ಉಳಿದ ಇಬ್ಬರೂ ಜನ ಕೂಡಿ ಜಮೀನಿಗೆ ಹೋಗಿದ್ದರ ಬಗ್ಗೆ ಮತ್ತು ಆರೋಪಿತರೆಲ್ಲರೂ ಬಿತ್ತನೆ ಮಾಡುವುದರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತರೆಲ್ಲರೂ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿರಿಗೆ ಮತ್ತು ಜಮೀನಿಗೆ ಯಾವುದೇ ಸಂಬಂದವಿಲ್ಲದಿದ್ದರೂ ಕೂಡ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಜಮೀನಿನಲ್ಲಿ ಅತೀಕ್ರಮ ಪ್ರವೇಶ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**